ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿ ಸಾಕಷ್ಟು ನೀರು ಸಿಕ್ಕದಿರುವದರಿಂದ ಮಾನ್ಯ ಸದಸ್ಯರು ಹೇಳಿರುವ ಯೋಜನೆ ತೆಗೆದುಕೊಳ್ಳಲಿಕ್ಕಾಗುವದಿಲ್ಲ. ಬೇರೆ ಲಿಫ್ಟ್ ಇರಿಗೇಷನ್ ಯೊಜನೆ ಬಗ್ಗೆ ಅಲ್ಲಿ ಪರಿಶೀಲಿಸಿಲ್ಲ. ಅದರ ಬಗ್ಗೆ ಕಳಕಳಿಯಿಂದ ಪ್ರಯತ್ನ ಮಾಡಲಾಗುವದು.

ಶ್ರೀಮತಿ ರಾಧಾ ಭಟ್.—ಈ ಭಾಗದಲ್ಲಿ ಆದಷ್ಟು ಬೇಗ ನೀರಾವರಿ ಯೋಜನೆ ತೆಗೆದುಕೊಳ್ಳಲು ಪರಿಶೀಲಿಸುವಿರಾ? ಹಾಗೆ ಪರಿಶೀಲಿಸಲು ಎಷ್ಟು ಕಾಲಾವಕಾಶ ಬೇಕು? ಅಲ್ಲಿ ಇದರ ಬಗ್ಗೆ ಜನರ ಭಾರೀ ಬೇಡಿಕೆಯಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬೇಡಿಕೆ ಇಲ್ಲ, ಬೇಡಿಕೆ ಬಂದರೆ ಪರಿಶೀಲಿಸುತ್ತೇವೆ.

ಅಧ್ಯಕ್ಷರು.—ಈಗ ಪ್ರಶ್ನೆ ನಂ. ೪೪೧, ಆದರೆ ಮಂತ್ರಿಗಳೂ ಬಂದಿಲ್ಲ, ಅವರಿಂದ ಕಾಗದವಾನೂ ಬಂದಿಲ್ಲ. This has been happening many a time.

Sri H. M. CHANNABASAPPA.— I am really very sorry. He might be on his way. It may be held over and taken after the other Questions are over, it can be taken up later.

MADAM SPEAKER.– Will this privilege be given to the Members also and their questions kindly held over till they come ?

(No answer)

FINANCIAL ASSISTANCE TO CHAMUNDI CHEMICAL AND FERTILISERS LTD., MUNIRABAD

1022. Sri M. VIRUPAKSHAPPA (Koppal).— Will the Minister for Industries be pleased to state:—whether the Government is considering to give financial assistance to Chamundi Chemical and Fertilisers Ltd., Munirabad, in view of its week financial position to start the factory again in the near future ?

Sri S. M. KRISHNA (Minister for Industries).—

No.

ಶ್ರೀ ಎಂ. ವಿರೂಪಾಕ್ಷಪ್ಪ.— ಈ ಗಿರಣಿಯ ಕೂಲಿಕಾರರ ಕಷ್ಟವನ್ನು ಗಮನಿಸಿ ಈ ಕಾರ್ಖಾನೆಯನ್ನು ಪುನ: ಪ್ರಾರಂಭಿಸಲು ಯೋಚನೆಮಾಡುವಿರಾ ?

†ಶ್ರೀ ಎಸ್. ಎಂ. ಕೃಷ್ಣ.— ಈ ಕಾರ್ಖಾನೆಯವರು ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ನಿಗೆ ೩೫ ಲಕ್ಷ ರೂಪಾಯಿ ಕೊಡಬೇಕಾಗಿದೆ. ಇದಲ್ಲದೆ ಪಂಜಾಬ ನ್ಯಾಷನಲ್ ಬ್ಯಾಂಕಿಗೆ ೨೦ ಲಕ್ಷ ರೂಪಾಯಿ ಕೊಡಬೇಕಾಗಿದೆ. ಈ ಎಲ್ಲಾ ಲಯಬಲಿಟೀಸ್ ಗಮನಿಸಿದರೆ ಸರಕಾರದವರು ಕಾರ್ಖಾನೆಯನ್ನು ತೆಗೆಯುವುದಕ್ಕೆ ಸಾಧ್ಯವಿಲ್ಲ. ಇದು Economically not a very attractive proposition. ಆದುದರಿಂದ ಇದನ್ನು ತೆಗೆದುಕೊಳ್ಳುವುದಕ್ಕೆ ಮನಸ್ಸು ಮಾಡಿಲ್ಲ.

ಶ್ರೀ ಎಂ. ವಿರೂಪಾಕ್ಷಪ್ಪ.—ಹಾಗಾದರೆ ಈಗ ತಮ್ಮ ಮುಂದಿರುವ ಯೋಚನೆ ಏನು? ಈಗಿರುವ ಕೆಲಸಗಾರರಿಗೆ ಮತ್ತು ಸಿಬ್ಬಂದಿಗೆ ಸಂಬಳ ಸಿಕ್ಕುತ್ತಿಲ್ಲ. ಈ ದೃಷ್ಟಿಯಿಂದ ಸರಕಾರಕ್ಕೆ ನಷ್ಟವಾದರೂ ಈ ಕಾರ್ಖಾನೆಯನ್ನು ನಡೆಸುವ ಯೋಚನೆ ಮಾಡುತ್ತೀರಾ?

ಶ್ರೀ ಎಸ್. ಎಂ. ಕೃಷ್ಣ.—ಈ ಕಂಪನಿಯಲ್ಲಿ ಸರ್ಕಾರದ ಬಂಡವಾಳ ಯಾವ ರೀತಿಯಲ್ಲಿಯೂ ಇಲ್ಲ. ಜೊತೆಗೆ ಕಂಪನಿಯಲ್ಲಿರುವ ನೌಕರರನ್ನು ತೆಗೆದುಹಾಕಿದ್ದಾರೆ ಎಂದು ಕೆಲವರು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಲೇಬರ್ ಡಿಪಾರ್ಟಮೆಂಟಿನವರು ಇದರ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಫ್ಯಾಕ್ಟರಿಯ ಮಾಲೀಕರು ಬರೀ ಚಾಮುಂಡಿ ಕೆಮಿಕಲ್ ಫರ್ಟಿಲೈಸರ್ಸ್ ಫ್ಯಾಕ್ಟರಿಯ ಮಾಲೀಕರು ಅಷ್ಟೇ ಅಲ್ಲ, ಬೆಂಗಳೂರಿನಲ್ಲಿರುವ ಮೈಸೂರು ಮೆಷಿನರೀಸ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿಯ, ಮತ್ತು ಮೈಸೂರಲ್ಲಿರುವ ಚಾಮುಂಡಿ ಕಾಫಿ ಕ್ಯೂರಿಂಗ್ ವರ್ಕ್ಸ್ ಮಾಲೀಕರೂ ಆಗಿದ್ದಾರೆ. ಎಲ್ಲಾ ಕಡೆ ಸರ್ಕಾರದಿಂದ ಆರ್ಥಿಕ ಸಹಾಯ ಮಾಡುವಂಥ ಸಂಸ್ಥೆಗಳಿಂದ ಸಹಾಯ ಪಡೆದು ಎಲ್ಲರಿಗೂ ಇವತ್ತಿನ ದಿವಸ ಮೋಸ ಮಾಡಿರುವುದು ತಮಗೆ ಗೊತ್ತಿದೆ. ಹೀಗೆ ಇರುವಾಗ ತಾವು ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಮುಂದೆ ಬಂದಿದ್ದೀರಿ? ಮುನಿರಾಬಾದ್ ಕೆಮಿಕಲ್ಸ್ ಫ್ಯಾಕ್ಟರಿ ಮುಖ್ಯವಾಗಿರುವುದರಿಂದ ಅದನ್ನು ಸಿಕ್ ಇಂಡಸ್ಟ್ರೀಸ್ ಎಂದು ಕನ್ಸಿಡರ್ ಮಾಡಿ, ಕೇಂದ್ರ ಸರ್ಕಾರದವರು ಸಿಕ್ ಇಂಡಸ್ಟ್ರೀಸ್ ತೆಗೆದುಕೊಳ್ಳುತ್ತಾರೆ ಎನ್ನುವುದು ಇದೆ, ಆದ್ದರಿಂದ ಅತಿ ಮುಖ್ಯವಾಗಿರುವ ಈ ಇಂಡಸ್ಟ್ರೀಯನ್ನೂ ಮತ್ತು ಮೈಸೂರು ಮೆಷಿನರೀಸ್ ಮ್ಯಾನ್ಯುಫ್ಯಾಕ್ಚರಿಂಗ ಕಂಪನಿಯನ್ನೂ ಸರ್ಕಾರದವರು ತಾವೇ ತೆಗೆದುಕೊಳ್ಳುವುದಕ್ಕೆ ಮುಂದೆ ಬರುತ್ತೀರಾ?

ಶ್ರೀ ಎಸ್.ಎಂ. ಕೃಷ್ಣ.—ಕೇಂದ್ರ ಸರ್ಕಾರದವರು ಸಿಕ್ ಟೆಕ್ಸ್‌ಟೈಲ್ ಮಿಲ್ ಅನ್ನು ರೀಜನ್ಯುಯೇಟ್ ಮಾಡುವುದಕ್ಕೆ ಕಾರ್ಪೊರೇಷನ್ ಮಾಡಿದ್ದಾರೆ. ಆದ್ದರಿಂದ ಸಿಕ್ ಟೆಕ್ಸ್‌ಟೈಲ್ ಮಿಲ್ಸ್ ಅನ್ನು ಕಾರ್ಪೊರೇಷನ್ ವತಿಯಿಂದ ತೆಗೆದುಕೊಂಡು ನಡೆಸುವುದಕ್ಕೆ ಸಹಾಯಕವಾಗಿದೆ. ಅದೇ ರೀತಿ ದೇಶದಲ್ಲಿ ಸಿಕ್ ಫರ್ಟಿಲೈಸರ್ಸ್ ಯುನಿಟ್ಸ್ ಏನು ಇವೆ ಅವುಗಳನ್ನು ತೆಗೆದುಕೊಂಡು ವಹಿವಾಟು ಮಾಡಿ ನಡೆಸುವುದಕ್ಕೆ ಸಿಕ್ ಫರ್ಟಿಲೈಸರ್ ಕಾರ್ಪೊರೇಷನ್ ಮಾಡುವುದಾದರೆ ಬಹುಶಃ ರಾಜ್ಯ ಸರ್ಕಾರದವರು

ಇದರಲ್ಲಿ ಆಸಕ್ತಿಯನ್ನು ಹೊಂದಿದ್ದಾರೆ. ಕೇಂದ್ರ ಸರ್ಕಾರಕ್ಕೆ ಈ ಒಂದು ಸಲಹೆಯನ್ನು ಬರೆದು ತಿಳಿಸುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ರೆಗ್ಯುಲೇಷನ್ ಆಕ್ಟ ಪ್ರಕಾರ ತಾವೇ ತೆಗೆದುಕೊಳ್ಳಬಹುದಲ್ಲವೇ?

Sri S. M. KRISHNA.—The liabilities also will devolve whoever is the person-whether it is Government or anybody else. And the liabilities that have accrued to the Company will be passed in to the successor. The point is : whether Government can indulge in taking up a sick unit of this kind which has very many liabilities and still make it a profitable proposition.

ಶ್ರೀ ಎಚ್. ಎಸ್. ಸಿದ್ದಪ್ಪ.—ದೇಶದಾದ್ಯಂತ ಇರುವ ಸಿಕ್ ಇಂಡಸ್ಟ್ರೀಸ್ ಗಳನ್ನು ತಮ್ಮ ಗಮನಕ್ಕೆ ತಂದರೆ, ಕೇಂದ್ರ ಸರ್ಕಾರಕ್ಕೆ ಬರೆದು, ಒಂದು ಕಾರ್ಪೋರೇಷನ್ ಮಾಡಿ ಧನಸಹಾಯ ಮಾಡುವ ವ್ಯವಸ್ಥೆ ಮಾಡುತ್ತೇವೆಂದು ಹೇಳಿದಿರಿ, ಪ್ರೈವೇಟ್ ಬಂಡವಾಳಗಾರರು ಸಿಕ್ ಇಂಡ್ಸ್ಟ್ರೀಸ್‌ಗೆ ಸಹಾಯ ಮಾಡಿಕೊಡಿ ಎಂದು ಮನವಿಯನ್ನು ಸಲ್ಲಿಸಿದರೆ ಅವುಗಳಿಗೂ ಸಹಾಯ ಮಾಡಿಕೊಡುತ್ತೀರಾ?

ಶ್ರೀ ಎಸ್. ಎಂ. ಕೃಷ್ಣ.—ಸಾಧ್ಯವಾಗುವುದಿಲ್ಲ.

SEASIDE COTTAGES AND HOTELS AT BEACH ADJOINING MANGALORE

941. Smt. ADDY SALDANHA(Mangalore).—

Will the Minister for Lobour be pleased to state :—

(a) the location of the proposed 5 Star Hotel at Mangalore under the auspices of International Tourist Development Corporation;

(b) whether the Government is thinking of putting up of some seaside cottages and hotels at the beach adjoining Panambur ?

Sri K. H. PATIL (Minister for Agriculture and Forests) [On behalf of Sri AZEEZ SAIT (Minister for Labour)].—

(a) Government is not aware of any such proposal.

(b) No.